ಇಂದು ದಿನಾಂಕಃ 07-02-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ ಎಸ್.ಎನ್.ಬಿ. ವಕೀಲರಿಂದಃ-

ನನ್ನ ತಂದೆ ಪೂಜೆ ಕೆಲಸ ಮಾಡುತ್ತಾರೆ. ಮದುವೆ ಸಮಯಕ್ಕೆ ನೀಡಿದ ಸಾಮಾನುಗಳು ಸೇಡಂದಿಂದ ಖರೀದಿ ಮಾಡಲಾಗಿದೆ. ಸದರಿ ಸಾಮಾನುಗಳ ರಸೀದಿಯನ್ನು ನಾನು ನೋಡಿಲ್ಲ ಸಾಕ್ಷಿ ಮುಂದುವರೆದು ನನ್ನ ತಂದೆ ತಾಯಿಗೆ ಗೊತ್ತು ಎಂದು ನುಡಿಯುತ್ತಾರೆ. ನಾನು ಪೋಲಿಸರಿಗೆ ಸದರಿ ಸಾಮಾನುಗಳ ರಸೀದಿಯನ್ನು ನೀಡಿಲ್ಲ. ಸದರಿ ಬಿಲ್ ಗಳನ್ನು ನಾನು ನೋಡಿಲ್ಲ. ಆರೋಪಿತರಿಗೆ ಯಾವುದೇ ಸಾಮಾನುಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

1 ನೇ ಆರೋಪಿಯ ತಂದೆ ತಾಯಿಗೆ 1 ನೇ ಆರೋಪಿ ಒಬ್ಬನೆ ಮಗ ಇರುತ್ತಾನೆ. 1 ನೇ ಆರೋಪಿಯ ತಂದೆ ಮೃತಪಟ್ಟಿದ್ದಾರೆ. 1 ನೇ ಆರೋಪಿಯ ತಾಯಿಗೆ ನೋಡಿಕೊಳ್ಳುವ ಜವಾಬ್ದಾರಿ 1 ನೇ ಆರೋಪಿ ಮೇಲೆ ಇದೆ. ಮದುವೆ ಸಮಯಕ್ಕೆ ನನ್ನ ತಂದೆಯ ಗೆಳಯರಿಂದ ಸಾಲ ಪಡೆದುಕೊಂಡಿದ್ದಾರೆ. ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. ಸದರಿ ಗೆಳೆಯರು ರಾಯಕೋಡ ಗ್ರಾಮದವರು. ನನ್ನ ತಂದೆ 2 ರಿಂದ 3.5 ಲಕ್ಷ ಸಾಲ ಅವರ ಗೆಳೆಯರಿಂದ ಪಡೆದುಕೊಂಡಿದ್ದಾರೆ. ಸಾಮಾನ್ಯವಾಗಿ ಸಾಲ ಕೋಡುವ ಸಮಯಕ್ಕೆ ಲಿಖಿತ ರೂಪದಲ್ಲಿ ಬರೆಯುತ್ತಾರೆ ಎಂದರೆ ಸಾಕ್ಷಿ ಗೆಳೆಯರಿಗೆ ಸಾಲ ಕೋಡುವಾಗ ಬರೆಯುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಗೆಳೆಯರು ಸಾಲ ಕೋಡುವ ಸಮಯಕ್ಕೆ ದಾಖಲೆ ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಸಾಲ ಕೋಡುವ ಸಮಯಕ್ಕೆ ಕುಟುಂಬ ಜನರ ಸಲಹೆ ಪಡೆದು ಕೋಡುತ್ತಾರೆ ಎಂದರೆ ಸಾಕ್ಷಿ ಗೆಳೆಯರಿಗೆ ಸಾಲ ಕೋಡುವ ಸಮಯಕ್ಕೆ ಸಲಹೆ ಪಡೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಯಾವುದೇ ಸಾಲ ಪಡೆಯದೇ ಕಟ್ಟು ಕಥೆ ಕಟ್ಟಿ ನಾನು ಮತ್ತು ನನ್ನ ಕುಟುಂಬದವರು ಸೇರಿ ಆರೋಪಿತರ ವಿರುದ್ದ ಷೇಡೆಂತ್ರ ಮಾಡಿದ್ದೇವೆ ಎಂದರೆ ಸರಿಯಲ್ಲ.

ಪ್ರಕರಣ ಹೂಡುವುದಕ್ಕಿಂತ ಮುಂಚೆ 2-3 ಬಾರಿ ಪಂಚಾಯಿತಿಯಾಗಿದೆ. ಮೊದಲನೇ ಪಂಚಾಯಿತಿಯಲ್ಲಿ ನಾನು, ನನ್ನ ತಂದೆ ತಾಯಿ, ರೇವಣಸಿದ್ದಯ್ಯ ಸ್ವಾಮಿ ಇದ್ದರು, ಎರಡನೇ ಪಂಚಾಯಿತಿಯಲ್ಲಿ 1 ನೇ ಆರೋಪಿಯ ಮನೆಯ ಎದುರು ನಾರಾಯಣ ರೆಡ್ಡಿ, ಸಂತೋಷ, ರೇವಣಸಿದ್ದಯ್ಯ, 1 ನೇ ಆರೋಪಿಯ ಸೋದರ ಮಾವ, ಚಂದ್ರಕಾಂತ ಇದ್ದರು. ಸಾಕ್ಷಿ ಮುಂದುರೆದು

2 ನೇ ಬಾರಿ ಪಂಚಾಯಿತಿಯಲ್ಲಿ 1 ನೇ ಆರೋಪಿ ನನ್ನ ತಂಗಿಗೆ ಒದ್ದಿರುತ್ತಾನೆ ಎಂದು ನುಡಿಯುತ್ತಾರೆ. ಮೂರನೇ ಬಾರಿ ಪಂಚಾಯಿತಿ ಸುಲೇಪೇಟ ಪೋಲಿಸ ಠಾಣೆಯಲ್ಲಿ ಆಗಿದೆ. ಸಾಕ್ಷಿ ಮುಂದುವರೆದು ಪಿ.ಎಸ್.ಐರವರ ಸಮಕ್ಷಮ ಪಂಚಾಯಿತಿ ಆಗಿದೆ. ಪಿ.ಎಸ್.ಐ ರವರು 1 ನೇ ಆರೋಪಿಗೆ ತಿಳಿಹೇಳಿದ್ದಾರೆ ಎಂದು ನುಡಿಯುತ್ತಾರೆ. ಪಿ.ಎಸ್.ಐರವರ ಹೆಸರು ನನಗೆ ನೆನಪಿಲ್ಲ. ಆ ಸಮಯಕ್ಕೆ ನಾವು ದೂರು ನೀಡಿಲ್ಲ. ಪಿ.ಎಸ್.ಐರವರು ತಿಳಿ ಹೇಳಿ ವಾಪಾಸ್ ಕಳುಹಿಸಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗ ಸುಮಾರು 8 ವರ್ಷಗಳಿಂದ ನಾನು ಬೀದರನಲ್ಲಿ ವಾಸವಿದ್ದೇನೆ. 2017 ರಲ್ಲಿ ಘಟನೆಯಾದಾಗಿನಿಂದ ನನ್ನ ತಂಗಿ ನಮ್ಮ ಜೊತೆ ವಾಸವಿದ್ದಾಳೆ. ಆಗಿನಿಂದ 1 ನೇ ಆರೋಪಿಗೆ ನನ್ನ ತಂಗಿ ಬೇಟಿಯಾಗಿರುತ್ತಾರಾ ಮತ್ತು ನನ್ನ ತಂಗಿ 1 ನೇ ಆರೋಪಿಗೆ ಬೇಟಿಯಾಗಿರುತ್ತಾರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಗೊತ್ತಿರುವ ಪ್ರಕಾರ ಆಗಿಲ್ಲ ಎಂದು ನುಡಿಯುತ್ತಾರೆ. ಘಟನೆಯಾದಾಗ ನನ್ನ ತಂದೆ ನನಗೆ ಕರೆಮಾಡಿ ತಿಳಿಸಿದ್ದಾರೆ. ಅಂದಾಜು ಬೆಳಗ್ಗೆ 11.30 ರಿಂದ 1 ಗಂಟೆ ಒಳಗೆ ನನ್ನ ತಾಯಿ ನನಗೆ ಕರೆ ಮಾಡಿದ್ದಾಳೆ.

ಬೀದರದಿಂದ ನಾನು ನೇರವಾಗಿ ಸಾಯಂಕಾಲ 4.30 ರಿಂದ 5 ಗಂಟೆ ಸುಮಾರಿಗೆ ಸೇಡಂ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಆಸ್ಪತ್ರೆಗೆ ಹೋದಾಗ ನನ್ನ ತಂಗಿಗೆ ಪ್ರಜ್ಞ ಇರಲಿಲ್ಲ, ನಾನು ಹೋಗಿ ಅರ್ಧ ಗಂಟೆ - ಒಂದು ಗಂಟೆ ಬಿಟ್ಟು ಪ್ರಜ್ಞೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂಗಿ ಆಸ್ಪತ್ರೆಯಲ್ಲಿ ಅಂದಾಜು ಎರಡು ದಿನ ಇದ್ದರು. ನಾನು ಆಸ್ಪತ್ರೆಗೆ ಹೋಗುವುದಕ್ಕಿಂತ ಮೊದಲು ಪೋಲಿಸರು ಬಂದು ಹೊಗಿದ್ದಾರೆ ಎಂದು ನನಗೆ ತಿಳಿಸಿದ್ದಾರೆ. ನಾನು ಹೊಗುವುದಕ್ಕಿಂತ ಮೊದಲು ನನ್ನ ತಂಗಿ ಪೋಲಿಸರಿಗೆ ಹೇಳಿಕೆ ನೀಡಿದ್ದರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನಾನು ಹೊದ ನಂತರ ನನ್ನ ತಂಗಿಗೆ ಪ್ರಜ್ಞೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂಗಿಗೆ ಪ್ರಜ್ಞೆ ಬಂದ ನಂತರ ನನ್ನ ತಂಗಿ ಪೋಲಿಸ ಠಾಣೆಗೆ ಹೋಗಿದ್ದಾರಾ ಅಥವಾ ನಾನು ಹೋಗಿದ್ದಿನಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಪೋಲಿಸರು ನಿಮ್ಮ ತಂಗಿ ಕೈಯಿಂದ ಬರೆಸಿಕೊಂಡು ಬನ್ನಿ ಎಂದು ಹೇಳಿದ ಕಾರಣ ನನ್ನ ತಂಗಿಗೆ ಪ್ರಜ್ಞೆಬಂದು 1-2 ಗಂಟೆ ನಂತರ ನನ್ನ ತಂಗಿ ಘಟನೆ ಬಗ್ಗೆ ವಿವರಿಸಿದ್ದು ಮತ್ತು ಘಟನೆ ಬಗ್ಗೆ ನನ್ನ ತಂಗಿ ಕಾಗದ ಮೇಲೆ ಬರೆದು ನನಗೆ ಕೊಟ್ಟಿರುತ್ತಾಳೆ, ಆಗ ರಾತ್ರಿ ಸಮಯವಾಗಿದ್ದರು ಸಹ ನಾನು, ನನ್ನ ಗೆಳೆಯ ಸೇರಿ ಸುಲೇಪೇಟ ಪೋಲಿಸ ಠಾಣೆಗೆ ತೆಗೆದುಕೊಂಡು ಹೋದಾಗ ಪೋಲಿಸರು ಸಾಹೇಬ್ರು ಇಲ್ಲ ನಾಳೆ ಬೆಳಗ್ಗೆ ಬನ್ನಿ ಎಂದು

ಹೇಳಿದ್ದು ಆದ್ದರಿಂದ ನಾವು ಸದರಿ ಕಾಗದವನ್ನು 12 ನೇ ತಾರೀಕದಂದು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಆ ದಿನ ನಾವು ಪೋಲಿಸ ಠಾಣೆಗೆ ಹೋದಾಗ ಬರಹಗಾರರು ಮತ್ತು ಇನ್ನೊಬ್ಬರು ಇದ್ದರು. 11 ನೇ ದಿನಾಂಕದಂದು ಪೋಲಿಸ ಠಾಣೆಗೆ ಹೋದಾಗ ಅಂದಾಜು ರಾತ್ರಿ 8 ರಿಂದ 10 ಗಂಟೆಯಾಗಿತ್ತು. ಪೋಲಿಸರು ನಾಳೆ ಬನ್ನಿ ಎಂದು ದೂರಿನಲ್ಲಾಗಲಿ, ಪೋಲಿಸರಿಗೆ ಕೊಟ್ಟ ಹೇಳಿಕೆಯಲ್ಲಿ ಅಥವಾ ನ್ಯಾಯಾಲಯದ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಕೇಳಿಲ್ಲ ಆದ್ದರಿಂದ ನಾನು ಹೇಳಿಲ್ಲ ಎಂದು ನುಡಿಯುತ್ತಾರೆ.

14 ನೇ ದಿನಾಂಕದಂದು 1 ನೇ ಆರೋಪಿ ಮನೆಯ ಮುಂದೆ ಪೋಲಿಸರು ಪಂಚನಾಮೆ ಮಾಡಲು ಕರೆದಾಗ ಹೋಗಿದ್ದೇನೆ. 14 ನೇ ದಿನಾಂಕದಂದು ನಾನು ನೇರವಾಗಿ ಘಟನಾ ಸ್ಥಳಕ್ಕೆ ಹೋಗಿದ್ದೇನೆ. ಅದೇ ದಿನ ಪಂಚನಾಮೆ ಮಾಡಿದ್ದಾರೆ. ಪಂಚನಾಮೆ ಮಾಡುವ ಸಮಯಕ್ಕೆ ಪೋಲಿಸರು ನನಗೆ ಘಟನೆ ಬಗ್ಗೆ ವಿಚಾರಿಸಿದ್ದಾರೆ. ಆರೋಪಿತರು ನನ್ನ ತಂಗಿಗೆ ನೇಣು ಹಾಕಲು ಪ್ರಯತ್ನಿಸಿದ್ದಾರೆ ಎಂದು ಹೇಳಿಕೆಯಲ್ಲಿ ಬರೆಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನನ್ನ ತಂಗಿಯ ಗಂಡ ಮತ್ತು ನನ್ನ ತಂಗಿಯ ಅತ್ತೆ ಸೇರಿ ಬಂಗಾರ ತೆಗೆದುಕೊಂಡು ಬಾ ಎಂದು ಹೇಳಿದರು ಸಹ ತಂದಿಲ್ಲ ಎಂದು ಹೊಡೆದಿದ್ದಾರೆ, ಬೇನ್ನಿಗೆ ಒದ್ದಿದ್ದಾರೆ ಮತ್ತು ಒಡಣಿಯಿಂದ ಕತ್ತಿಗೆ ಹಾಕಿ ಜಗ್ಗಿಕೊಂಡು ಕರೆದುಕೊಂಡು ಹೋಗಿದ್ದಾರೆ ಮತ್ತು ಮಂಚದ ಹತ್ತಿರ ಹೋದಾಗ ಪ್ರಜ್ಞೆ ತಪ್ಪಿರುತ್ತದೆ ಎಂದು ನನ್ನ ತಂಗಿ ನನಗೆ ತಿಳಿಸಿದ್ದು ನಾನು ಪೋಲಿಸರಿಗೆ ಹೇಳಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಂಗಿಯ ಗಂಡ ಮತ್ತು ನನ್ನ ತಂಗಿಯ ಅತ್ತೆ ಸೇರಿ ಬಂಗಾರ ತೆಗೆದುಕೊಂಡು ಬಾ ಎಂದು ಹೇಳಿದರು ಸಹ ತಂದಿಲ್ಲ ಎಂದು ಹೊಡೆದಿದ್ದಾರೆ, ಬೇನ್ನಿಗೆ ಒದ್ದಿದ್ದಾರೆ ಮತ್ತು ಒಡಣಿಯಿಂದ ಕತ್ತಿಗೆ ಹಾಕಿ ಜಗ್ಗಿಕೊಂಡು ಕರೆದುಕೊಂಡು ಹೋಗಿದ್ದಾರೆ ಮತ್ತು ಮಂಚದ ಹತ್ತಿರ ಹೋದಾಗ ಪ್ರಜ್ಞೆ ತಪ್ಪಿರುತ್ತದೆ ಎಂದು ದೂರಿನಲ್ಲಿ ಉಲ್ಲೇಖವಿದೆ. ನನ್ನ ತಂಗಿಯ ಗಂಡ ಮತ್ತು ನನ್ನ ತಂಗಿಯ ಅತ್ತೆ ಸೇರಿ ಬಂಗಾರ ತೆಗೆದುಕೊಂಡು ಬಾ ಎಂದು ಹೇಳಿದರು ಸಹ ತಂದಿಲ್ಲ ಎಂದು ಹೊಡೆದಿದ್ದಾರೆ, ಬೇನ್ನಿಗೆ ಒದ್ದಿದ್ದಾರೆ ಮತ್ತು ಒಡಣಿಯಿಂದ ಕತ್ತಿಗೆ ಹಾಕಿ ಜಗ್ಗಿಕೊಂಡು ಕರೆದುಕೊಂಡು ಹೋಗಿದ್ದಾರೆ ಮತ್ತು ಮಂಚದ ಹತ್ತಿರ ಹೋದಾಗ ಪ್ರಜ್ಞೆ ತಪ್ಪಿರುತ್ತದೆ ಎಂದು ಪೋಲಿಸರಿಗೆ ಕೊಟ್ಟ ಹೇಳಿಕೆಯಲ್ಲಿ ಉಲ್ಲೇಖವಿದೆಯೇ ಎಂದು ಪ್ರಶ್ನಸಿದಾಗ ಸಾಕ್ಷಿ ನಾನು ಪೋಲಿಸರಿಗೆ ಹೇಳಿದ್ದೇನೆ ಎಂದು ನುಡಿಯುತ್ತಾರೆ.

ನನ್ನ ಹೇಳಿಕೆಯಲ್ಲಿ ಇರುವಂತೆ ದಿನಾಂಕ 11-10-2017 ರಂದು ಅಂದಾಜು 12.30 ಗಂಟೆಯ

ಸುಮಾರಿಗೆ ರುದನೂರು ಗ್ರಾಮದ ಅಂಬರೀಶ ಮಠಪತಿ ಇತನು ನಮ್ಮೂರಿಗೆ ಬಂದು ನಿಮ್ಮ ತಂಗಿ ರುದನೂರು ಗ್ರಾಮದಲ್ಲಿ ತನ್ನ ಗಂಡನ ಮನೆಯಲ್ಲಿ ಬೆಳಗ್ಗೆ 10 ಗಂಟೆಯ ಸುಮಾರಿಗೆ ಯಾರೂ ಇಲ್ಲದಾಗ ಕಾಮಾಕ್ಷಿ ಇವಳು ತನ್ನ ಒಡಣಿಯಿಂದ ತಾನೆ ನೇಣು ಹಾಕಿಕೊಂಡಿರುತ್ತಾಳೆ. ಬಾಜು ಮನೆಯ ರಹೇಮತಬಿ, ನಾಗಮ್ಮ ಬಡಿಗೇರ, ಮಹೇಬೂಬಸಾಬ ಇವರು ನೋಡಿ ಬಿಡಿಸಿರುತ್ತಾರೆ ಅಂತ ತಿಳಿಸಿದನು ಎಂದು ಸುಳ್ಳು ಇರುತ್ತದೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಸುಳ್ಳು ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಅಂಬರೀಶರವರು ಮೇಲೆ ಅಲ್ಲಗಳೆದ ಹೇಳಿಕೆಯಂತೆ ನನ್ನ ತಂದೆ ತಾಯಿಗೆ ಹೇಳಿರುತ್ತಾನೆ ಎಂದು ನುಡಿಯುತ್ತಾರೆ. ಅಂಬರೀಶರವರು ಈ ರೀತಿ ಹೇಳಿದ್ದಾನೆ ಎಂದು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಹೇಳಿಲ್ಲ ಎಂದು ನುಡಿಯುತ್ತಾರೆ. ಘಟನೆ ನಡೆದ ದಿನದಂದು ಅಂಬರೀಶರವರು ನನ್ನ ತಂದೆ ತಾಯಿಗೆ ತಿಳಿಸಿದ್ದಾನೆ. ಅಂಬರೀಶರವರು ನನ್ನ ತಂದೆ ತಾಯಿಗೆ ಹೇಳಿದ ನಂತರ ಪೋಲಿಸರಿಗೆ ಹೇಳಿಕೆ ನೀಡಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನನ್ನ ತಂಗಿ ಘಟನೆ ಬಗ್ಗೆ ನನಗೆ ತಿಳಿಸಿದ ನಂತರ ಹೇಳಿಕೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ಅಂಬರೀಶರವರು ನನ್ನ ತಂದೆ ತಾಯಿಗೆ ಹೇಳಿರುವ ಬಗ್ಗೆ ಮತ್ತು ನನ್ನ ತಂಗಿ ಘಟನೆ ಬಗ್ಗೆ ತಿಳಿಸಿದ ನಂತರ ಹೇಳಿಕೆ ನೀಡಿದ ಬಗ್ಗೆ ಕಟ್ಟು ಕಥೆ ಕಟ್ಟಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಹೇಳಿಕೆಯಲ್ಲಿ ಉಲ್ಲೇಖವಿದಂತೆ ಆಗ ನಾನು ಮತ್ತು ನನ್ನ ತಾಯಿ ಹಾಗೂ ಲಲಿತಾ ಬಾಯಿ ಕೂಡಿಕೊಂಡು ರುದನೂರು ಗ್ರಾಮಕ್ಕೆ ಹೋಗಿ ನನ್ನ ತಂಗಿ ಕಾಮಾಕ್ಷಿಗೆ ಉಪಚಾರ ಕುರಿತು ಕರೆದುಕೊಡಯಿ ಸೇಡಂ ಸರಕಾರಿ ಆಸ್ಪತ್ರೆಯಲ್ಲಿ ಸೇರಿಕೆ ಮಾಡಿರುತ್ತೇವೆ. ನನ್ನ ತಂಗಿ ಕಾಮಾಕ್ಷಿ ಇವಳಿಗೆ ಇಕೆಯ ಗಂಡ ಸಂಗಯ್ಯ ಅತ್ತೆ ಸಿದ್ದಮ್ಮ ಇವರು ತವರು ಮನೆಯಿಂದ 5 ತೋಲಿ ಬಂಗಾರ ಮತ್ತು 2 ಲಕ್ಷ ರೂ ತೆಗೆದುಕೊಂಡು ಬಾ ಎಂದು ಮಾನಸಿಕವಾಗಿ ಮತ್ತು ದೈಹಿಕವಾಗಿ ಕಿರುಕುಳವನ್ನು ಕೊಟ್ಟಿರುತ್ತಾರೆ. ಈ ಕೃತ್ಯಕ್ಕೆ ಸಿದ್ದಯ್ಯ ಕೊಳ್ಳುರು, ಚಂದ್ರಕಾಂತ ಮಠಪತಿ ಇವರು ಪ್ರಚೋದನೆ ನೀಡಿರುತ್ತಾರೆ ಈ ಕಿರುಕುಳವನ್ನು ಸಹಿಸದೆ ನನ್ನ ತಂಗಿ ತನ್ನ ಒಡಣಿಯಿಂದ ಆಕೆಯ ಗಂಡನ ಮನೆಯಲ್ಲಿ ನೇಣು ಹಾಕಿಕೊಂಡಿರುತ್ತಾಳೆ. ಮತ್ತು ನನ್ನ ತಂಗಿ ಈ ಕುರಿತು ಪಿ.ಎಸ್.ಐ ಸುಲೇಪೇಟ ರವರಿಗೆ ಬರೆದ ಫಿರ್ಯಾದಿ ದೂರನ್ನು ನಾನೇ ತಂದು ಸುಲೇಪೇಟ ಠಾಣೆಗೆ ಕೊಟ್ಟು ಪ್ರಕರಣ ದಾಖಲಿಸಿರುತ್ತೇನೆ. ಅಂತ ಹೇಳಿ ಟೈಪ ಮಾಡಿಸಿದ ಹೇಳಿಕೆ ನಿಜವಿರುತ್ತದೆ ಎಂಬುದು ಸುಳ್ಳು

ಇರುತ್ತದೇಯೇ ಎಂದು ಪ್ರಶ್ನಸಿದಾಗ ಸಾಕ್ಷಿ ಸುಳ್ಳು ಇರುತ್ತದೆ. ಸಾಕ್ಷಿ ಮುಂದುವರೆದು ನನ್ನ ತಾಯಿ, ಲಲಿತಾಬಾಯಿ, ಜೀಪ ಚಾಲಕ, ನನ್ನ ತಂದೆ ಸೇರಿ ನನ್ನ ತಂಗಿಗೆ ಸೇಡಂ ಆಸ್ಪತ್ರೆಗೆ ಕರೆದುಕೊಂಡು ಹೊದ ಬಗ್ಗೆ ಸರಿ ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಡಿ-3 ಎಂದು ಗುರುತಿಸಲಾಯಿತು. ಜೀಪ್ ಯಾರದು ಎಂದು ನನಗೆ ಹೇಳಲು ಬರುವುದಿಲ್ಲ. ಜೀಪ್ ಸಂಖ್ಯೆ ಮತ್ತು ಚಾಲಕನ ಹೆಸರು ನನಗೆ ಹೇಳಲು ಬರುವುದಿಲ್ಲ.

ಯಾವುದೇ ಘಟನೆಯಾಗದೆ ಇದ್ದರು ಸಹ ನನ್ನ ತಂಗಿ 1 ನೇ ಆರೋಪಿ ತನ್ನ ತಾಯಿಯನ್ನು ಬಿಟ್ಟರೇ ಮಾತ್ರ ನನ್ನ ತಂಗಿ 1 ನೇ ಆರೋಪಿಯ ಜೊತೆ ಇರುತ್ತೇನೆ ಎಂದು ಹೇಳಿದ ಕಾರಣ ಕಟ್ಟು ಕಥೆ ಕಟ್ಟಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂಗಿ 1 ನೇ ಆರೋಪಿಯ ತಾಯಿಗೆ ನೋಡಿ ಕೊಳ್ಳಲು ಆಗುವುದಿಲ್ಲ ಎಂದು 1 ನೇ ಆರೋಪಿ ನನ್ನ ತಂಗಿಗೆ ಸೇಡಂದಲ್ಲಿ ಮನೆ ಮಾಡಿ ಇಟ್ಟಿದ್ದ ಎಂದರೆ ಸಾಕ್ಷಿ ಸೇಡಂ ಮನೆ ಮಾಡಿದ್ದು ಸರಿ ಇರುತ್ತದೆ ಆದರೆ ಕಾರಣ ಸರಿ ಇರುವುದಿಲ್ಲ ಮತ್ತು 1 ನೇ ಆರೋಪಿ ಸರಕಾರಿ ನೌಕರನಾಗಿದ್ದು ಅವನಿಗೆ ಕಛೇರಿಗೆ ಹೋಗಿ ಬರೋದ ತೊಂದರೆಯಾದ ಕಾರಣ ಸೇಡಂನಲ್ಲಿ ವಾಸವಿದ್ದ ಎಂದು ನುಡಿಯುತ್ತಾರೆ. ನನ್ನ ತಂಗಿ 1 ನೇ ಆರೋಪಿಯ ತಾಯಿಯ ಜೊತೆ ಇರಲು ಸಿದ್ದ ಇಲ್ಲದೆ ಇರುವ ಕಾರಣ ನಾನು, ನನ್ನ ತಂಗಿ ಮತ್ತು ನನ್ನ ಕುಟುಂಬದವರು ಸೇರಿ ಸುಳ್ಳು ಕಥೆ ಕಟ್ಟಿ ಆರೋೇಪಿತರಿಗೆ ಸತಾಯಿಸಲು ಸುಳ್ಳು ಪ್ರಕರಣವನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ತಂಗಿಗೆ ಯಾವುದೇ ವರದಕ್ಷಿಣೆ ಕೊಡಲು ಕಿರುಕುಳ ಮಾಡಿರುವುದಿಲ್ಲ ಮತ್ತು ನಾವೇ ಸುಳ್ಳು ಕಥೆ ಕಟ್ಟಿ ಪ್ರಕರಣ ಹೂಡಿದ್ದೇವೆ ಎಂದರೆ ಸರಿಯಲ್ಲ, ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

ನನ್ನ ತಂಗಿ ಆಸ್ಪತ್ರೆಯಲ್ಲಿ ದಾಖಲೆ ಬರೆದುಕೊಟ್ಟಾಗ 1 ನೇ ಆರೋಪಿಯನ್ನು ಕರೆದು ಪಂಚಾಯಿತಿ ಮಾಡಲು ಪ್ರಯತ್ನ ಪಟ್ಟಿದ್ದಿರಾ ಎಂದು ಪ್ರಶ್ನಸಿದಾಗ ಸಾಕ್ಷಿ ಮೊದಲು ಬಹಳಷ್ಟು ಬಾರಿ ಪಂಚಾಯಿತಿ ಮಾಡಿರುತ್ತೇವೆ ಮತ್ತು ಆರೋಪಿತರು ನನ್ನ ತಂಗಿಯ ಪ್ರಾಣ ತೆಗೆಯಲು ಮುಂದಾದ ಕಾರಣ ದೂರು ನೀಡಿದ್ದೇವೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯಾದ ನಂತರ 1 ನೇ ಆರೋಪಿಯನ್ನು ಕರೆಸಿ ಪಂಚಾಯಿಸಿ ಮಾಡಲು ಪ್ರಯತ್ನ ಪಟ್ಟಿಲ್ಲ. ನಾನು, ನನ್ನ ತಂದೆ, ನನ್ನ ತಾಯಿ ಹಾಗೂ ನನ್ನ ತಂಗಿ ಸೇರಿ ಆಸ್ಪತ್ರೆಯಲ್ಲಿ ಕುಳಿತು ಸುಳ್ಳು ಕಥೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂಗಿ ಆಸ್ಪತ್ರೆಗೂ ಹೋಗಿರುವುದಿಲ್ಲ ಮತ್ತು ಕಟ್ಟು

ಕಥೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ನಾನು ಬಿ.ಎ. ವ್ಯಾಸಂಗ ಮಾಡಿದ್ದೇನೆ. ಸಾಮಾನ್ಯವಾಗಿ ಯಾವುದೇ ಸಮೀಪ ಇರುವ ಪೋಲಿಸ ಠಾಣೆಗೆ ನೀಡಬೇಕು ಆಗ ಜೀರೋ ಎಪ್.ಐ.ಆರ್. ದಾಖಲೆಯಾಗುತ್ತದೆ ಎಂದರೆ ಸಾಕ್ಷಿ ಘಟನೆ ನಡೆದ ಸ್ಥಳ ಸುಲೆಪೇಟ ಪೋಲಿಸ ಠಾಣೆಯ ಸರಹದ್ದಿನಲ್ಲಿ ಬರುತ್ತಿರುವ ಕಾರಣ ಸುಲೇಪೇಟ ಪೋಲಿಸ

ಠಾಣೆಯಲ್ಲಿ ದೂರು ನೀಡಿದ್ದೇವೆ ಎಂದು ನುಡಿಯುತ್ತಾರೆ. ನಾವು ಮತ್ತು ಸುಲೇಪೇಟ ಪೋಲಿಸರು ಸೇರಿ ಸುಳ್ಳು ದೂರು ಸಲ್ಲಿಸಿ ಸುಳ್ಳು ಪ್ರಕರಣವನ್ನು ದಾಖಲೆ ಮಾಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಆರೋಪಿ ಸರಕಾರಿ ನೌಕರನಾದ ಕಾರಣ ಮತ್ತು ನನ್ನ ತಂಗಿ ಅವಳ ಅತ್ತೆಯನ್ನು ನೋಡಿಕೊಳ್ಳಲು ಇರಬೇಕು ಎಂಬ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**